ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸುಮಾರು ೨ ವರ್ಷಗಳಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲಾಗುವುದು.

ಇ) ಈ ಬಡಾವಣೆಯಲ್ಲಿ ಕೆಲವು ಮನೆಗಳಾಗಿದ್ದು ಕೊಳವೆ ಬಾವಿಗಳನ್ನು ಹಾಕುವುದರ ಬಗ್ಗೆ ಸರ್ಕಾರದ ಗಮನದಲ್ಲಿದೆ.

ರಾಜ್ಯದಲ್ಲಿ ಜೀತವಿಮುಕ್ತರಿಗೆ ಪುನರ್ ವಸತಿ ಕಲ್ಪಿಸುವುದು

೪೫(೨೫೩) ಶ್ರೀ ಪಿ. ಸಿ. ಮಂಜಿನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಜೀತ ವಿಮುಕ್ತರ ಪುನರ್ ವಸತಿ ಅನುಷ್ಠಾನ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನೀಡಿರುವ ಆರ್ಥಿಕ ಸಹಾಯವೆಷ್ಟು ಮತ್ತು ಇದನ್ನು ಜಾರಿ ಮಾಡುವ ಅಧಿಕಾರಿಗಳು ಯಾರು ?

ಆ) ಈಗ ಪುನರ್‌ವಸತಿ ಯೋಜನೆಯಲ್ಲಿ ನೇರವು ಪಡೆದಿರತಕ್ಕಂಥ ಫಲಾನುಭವಿಗಳ ಸ್ಥಿತಿಯು ಉತ್ತಮಗೊಂಡಿದೆಯೇ ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).

ಅ) ರಾಜ್ಯದಲ್ಲಿ ಜೀತ ವಿಮುಕ್ತರ ಪುನರ್ ವಸತಿ ಅನುಷ್ಠಾನ ಯೋಜನೆಯಲ್ಲಿ ಇಲ್ಲಿಯವರೆಗೆ ೧೨೭೨-೧೯ ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈ ಹಣದಲ್ಲಿ ೫೦:೫೦ ರಂತೆ ಕೇಂದ್ರ. ರಾಜ್ಯ ಸರಕಾರಗಳು ಭರಿಸುತ್ತದೆ. ಇದನ್ನು ಜಾರಿ ಮಾಡುವ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ವಿಶೇಷಜಿಲ್ಲಾಧಿಕಾರಿಗಳು (ಅಭಿವೃದ್ಧಿ) ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು.

ಆ) ಇದುವರೆಗೆ ೩೦,೦೨೯ ಸಂಖ್ಯೆ ಫಲಾನುಭವಿಗಳಿಗೆ ಸಹಾಯ ಧನ ಒದಗಿಸುತ್ತದೆ.

ಇವರ ಆರ್ಥಿಕ ಮಟ್ಟ ಉತ್ತಮವಾಗಿ ಇದೆಯಾ ಎಂದು ಜಿಲ್ಲೆಗಳಿಂದ ಮೌಲ್ಯಮಾಪನ ಕೇಳಿರುತ್ತದೆ. ಈ ಸಹಾಯಧನ ಮಾಕ್ರ ಆಲ್ಲದೇ ಫಲಾನುಭವಿಗಳ ಆರ್ಥಿಕ ಸ್ಥಿತಿ ಉತ್ತಮವಾಗುವವರೆಗೂ ಅವರಿಗೆ ಬೇರೆ ಬೇರೆ ಕಾರ್ಯಕ್ರಮದಡಿ ಪ್ರಯೋಜನ ಕೊಡಬೇಕು, ಬ್ಯಾಂಕುಗಳಿಂದಲೂ ಸಾಲ ಸೌಲಭ್ಯ ಕಲ್ಪಿಸಿ ಕೊಡಬೇಕೆಂದು ಈಗಾಗಲೇ ವಿಶೇಷ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ.

ಪ್ರಾರಂಭದಿಂದ ಇಲ್ಲಿಯವರೆಗೆ ಪುನರ್‌ವಸತಿ ಯೋಜನೆಯಲ್ಲಿ ನೆರವು ಪಡೆದಿರತಕ ಫಲಾನು ಭವಿಗಳ ಜಿಲ್ಲಾವಾರು ಅಂಕಿ ಅಂಶಗಳುಹೀಗಿವೆ.

೧)	ಬೆಂಗಳೂರು ಜಿಲ್ಲೆ	—೩೮೯೯
೨)	ಬೆಳಗಾಂ	— ೧೦
೩)	ಬಳ್ಳಾರಿ	— ೫೭೫
೪)	ಬೀದರ್	— ೧೦
೫)	ಬಿಜಾಪುರ	— ೨೦೨
೬)	ಚಿಕ್ಕಮಗಳೂರು	—೨೩೦೮
೭)	ಚಿತ್ರದುರ್ಗ	— ೯೭೨
೮)	ದಕ್ಷಿಣಕನ್ನಡ	— ೨೬೪
೯)	ಗುಲ್ಬರ್ಗ	— ೪೭
೧೦)	ಹಾಸನ	—೩೦೧೨

೧೧)	ಕೊಡಗು	— ೫೦
೧೨)	ಕೋಲಾರ	—೨೪೨೮
೧೩)	ಮಂಡ್ಯ	—೧೮೮೮
೧೪)	ಮೈಸೂರು	—೬೪೨೯
೧೫)	ಶಿವಮೊಗ್ಗ	—೫೯೩೮
೧೬)	ತುಮಕೂರು	—೨೦೨೨
೧೭)	ಉತ್ತರಕನ್ನಡ	— ೫
	ಒಟ್ಟು :	೩೦೧೯೯

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಕೇಂದ್ರಸರ್ಕಾರದ ನಿಯಮದಂತೆ ಜಿಲ್ಲಾಮಟ್ಟದಲ್ಲಿ ಜೀತವಿಮುಕ್ತರ ಸಲಹಾ ಸಮಿತಿಯನ್ನು ನೇಮಕ ಮಾಡಬೇಕು. ಆದರಂತೆ ಇಲ್ಲಿಯವರೆಗೆ ಎಷ್ಟು ಜಿಲ್ಲೆಗಳಲ್ಲಿ ಈ ಸಲಹಾ ಸಮಿತಿಗಳನ್ನು ನೇಮಕ ಮಾಡಿದ್ದೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಕೇಂದ್ರದಿಂದ ಆಗಿರತಕ್ಕ ಕಾನೂನು ಆಗಿರುವುದರಿಂದ, ಈ ಕಾನೂನಿನ ಅನ್ವಯ ಜಿಲ್ಲೆಯಲ್ಲಿ ಒಂದು ಸಮಿತಿ ಇರಬೇಕು. ಉಪ ವಿಭಾಗದಲ್ಲಿ ಒಂದೊಂದು ಸಮಿತಿ ಇರಬೇಕೆಂಬುದು ಕಾನೂನಿನಲ್ಲಿರತಕ್ಕ ಅಂಶ. ಈ ರೀತಿ ಅನೇಕ ಜಿಲ್ಲೆಗಳಲ್ಲಿ ಸಮಿತಿಯನ್ನು ಮಾಡಬೇಕಾಗುತ್ತದೆ. ಮೈಸೂರು, ಶಿವಮೊಗ್ಗ, ಕೋಲಾರ, ಹಾಸನ, ಮಂಡ್ಯ ಈ ಜಿಲ್ಲೆಗಳನ್ನು ಬಿಟ್ಟರೆ, ಎಲ್ಲಾ ಕಡೆಯೂ ಪುನರ್‌ವಸತಿ ಆಗಿರುವುದರಿಂದ ಮಾಡಿಲ್ಲ. ೩-೪ ಜಿಲ್ಲೆಗಳಿಗೆ ಸಮಿತಿ ಮಾಡಿದ್ದೇವೆ. ಈ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಗೆ ವಿವರಗಳನ್ನು ಕೇಳಿದ್ದೇವೆ. ಅವರಿಂದ ಮಾಹಿತಿ ಬಂದನಂತರ ಎಲ್ಲಾ ಕಡೆಗೂ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಜೀತ ವಿಮುಕ್ತರ ವಿಷಯದಲ್ಲಿ ಶಿವಮೊಗ್ಗ ಜಿಲ್ಲೆಗೆ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ, ೫ ಸಾವಿರ ಚಿಲ್ಲರೆ ಎಂದು ಹೇಳಿದ್ದಾರೆ. ಇದರಲ್ಲಿ ನನ್ನ ತಾಲ್ಲೂಕಿನಲ್ಲಿಯೇ ೨,೧೦೦ ಮಂಜೂರಾಗಿಲ್ಲ. ಚಿಲ್ಲರೆ ಇದ್ದಾರೆಂದು ಕಾಣುತ್ತದೆ. ಇಲ್ಲಿ ಏನಾಗಿದೆ ಎಂದರೆ ಇನ್ನೂ ಕೆಲವು ಜನಕ್ಕೆ ಪಣ ಇದೇರೀತಿ ಕರ್ನಾಟಕ ರಾಜ್ಯದಲ್ಲಿ ಅನೇಕ ಭಾಗದಲ್ಲಿ ಜೀತವಿಮುಕ್ತರು ಹಾಗೆಯೇ ಉಳಿದಿದ್ದಾರೆ. ಇವರನ್ನು ಮುಕ್ತ ಮಾಡಬೇಕು. ಯಾರು ಯಾರು ಬಿಟ್ಟು ಹೋಗಿದ್ದಾರೆ, ಅಂತವರು ಅನೇಕ ಜನರು ತಾಲ್ಲೂಕು ಬೋರ್ಡ್ ಮುಖಾಂತರ ಅರ್ಜಿ ಕೊಟ್ಟಿದ್ದಾರೆ. ಇಂತಹ ಅರ್ಜಿಗಳ ಬಗ್ಗೆ ತಾವು ಯಾವುದಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅನಂತರ ಫಲಾನುಭವಿಗಳಿಗೆ ಬೆಲೆ ಬಾಳುವಂತಹ ಕುರಿ, ಹಸುಗಳು, ಎಮ್ಮೆಗಳು ಇತ್ಯಾದಿ ಕೊಟ್ಟು, ಅವರ ಜೀವನವನ್ನು ಅಭಿವೃದ್ಧಿ ಮಾಡಬೇಕು, ಪುನರ್ ವಸತಿ ಕಲ್ಪಿಸಿಕೊಡಬೇಕೆಂಬುದು ಕೇಂದ್ರಸರ್ಕಾರದ ಯೋಜನೆ. ನನ್ನ ತಾಲ್ಲೂಕಿನಲ್ಲಿ ಇರತಕ್ಕಜೀತ ವಿಮುಕ್ತರ ಪರಿಸ್ಥಿತಿ ಉತ್ತಮ ಗೊಂಡಿದೆಯೇ ಎಂದು ಕೇಳಿನ್ನೆನೆ. ಪರಿಸ್ಥಿತಿ ಏನಾಗಿದೆ ಎಂದರೆ, ಕುರಿ, ಕೋಳಿ, ಕೊಟ್ಟಿರುವುದು ಒಬ್ಬರ ಹತ್ತಿರವೂ ಇಲ್ಲ, ಎಮ್ಮೆಗಳೂ ಇಲ್ಲ. ಕೆಲವು ಅಧಿಕಾರಿಗಳು ಸೇರಿಕೊಂಡು ಇದರಲ್ಲಿ ಲಂಚ ತಿಂದರು. ಈ ಬಗ್ಗೆ ಅವರ ಪರಿಸ್ಥಿತಿ ಉತ್ತಮಗೊಂಡಿಲ್ಲ ಎನ್ನುವುದು ನಮ್ಮೆಲ್ಲರ ಅಭಿಪ್ರಾಯ. ಈ ದೃಷ್ಟಿಯಿಂದ ಎಲ್ಲೆಲ್ಲಿ ಈ ಜನಕ್ಕೆ ಅನ್ಯಾಯವಾಗಿದೆ, ಉತ್ತಮಗೊಳಿಸುವುದಕ್ಕೆ ಯಾವ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಕೇಂದ್ರ ಸರ್ಕಾರದ ಜೊತೆ ಏನು ವ್ಯವಹಾರ ಮಾಡಿದ್ದೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಕೆಲವು ಕಡೆ ಫಲಾನ್ನುಭವಿಗಳನ್ನು ಐಡೆಂಟಿಫೈ ಮಾಡಿದೆ. ಮೈಸೂರಿನಲ್ಲಿ ಹೆಚ್ಚು ಜನರನ್ನು ಗುರುತಿಸಿದೆ. ರಾಜ್ಯದಲ್ಲಿ ಒಟ್ಟು ೬೨,೬೬೬ ಜನರನ್ನು ಗುರುತಿಸಿದ್ದೇವೆ ಅದರಲ್ಲಿ ಮೈಸೂರಿನಲ್ಲಿ ಸುಮಾರು ೨೨ ಸಾವಿರ ಜನರನ್ನು ಗುರುತಿಸಿದ್ದೇವೆ. ಬೇರೆ ಎಲ್ಲಾ ಜಿಲ್ಲೆಗಳಲ್ಲೂ ಪುನರ್‌ವಸತಿ ಆಗಿದೆ. ಜೀತವಿಮುಕ್ತರ ಪಟ್ಟಿಯನ್ನು ಸೇರಿಸುವ ಕಾರ್ಯ ಕೇಂದ್ರಸರ್ಕಾರದ ಕಾಯಿದೆ ಪ್ರಕಾರ ಮಾಡಬೇಕು. ಆದರೆ ಎಲ್ಲಾ ಜನರನ್ನೂ ಜೀತವಿಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಎರಡನೆಯ ಹಂತದಲ್ಲಿ ಗುರುತಿಸಬೇಕಾಗಿದ್ದರೆ, ಜಿಲ್ಲಾಧಿಕಾರಿಗಳನ್ನು ಅವರನ್ನು ಗುರುತಿಸಬೇಕು. ಅವರೇ ಅರ್ಜಿಯನ್ನು ಕೊಡಬೇಕು, ಲಾಯರ್‌ನೋಟೀಸ್ ಕೊಡಬೇಕು, ಲಾಯರ್ ನೋಟೀಸು ಕೊಡಬೇಕು. ಕಾರ್ಯಕ್ರಮ ಕೈಗೊಳ್ಳಬೇಕು. ಸರ್ಕಾರ ಆದೇಶ ಕೊಡುವುದಕ್ಕೆ ಬರುವುದಿಲ್ಲ. ಅರ್ಥಪೂರ್ಣವಾಗಿ ಪುನರ್‌ವಸತಿ ಆಗಿದೆಯೇ ಎಂಬ ಬಗ್ಗೆ ತಪಾಸಣೆ ಮಾಡುತ್ತಿದ್ದೇವೆ.

ಇವರ ಪುನರ್‌ವಸತಿ ಅರ್ಥಪೂರ್ಣವಾಗಿ ಆಗಿದೆಯೇ, ಜೀವನ ಸುಧಾರಣೆಯಾಗಿದೆಯೇ ಎಂಬುದರ ಬಗ್ಗೆ ತನಿಖೆ ಮಾಡಲು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಆದರೆ ನೀವು ತಿಳಿಸಿದ ಹಾಗೆ ನನಗೆ ಈ ವಿಚಾರದಲ್ಲಿ ವಿಶ್ವಾಸ ಇಲ್ಲ. ನಾನು ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ, ಅಧಿಕಾರಿಗಳಿಗೆ ಇದನ್ನು ಕೊಟ್ಟರೆ, ಪಾಪ ಅವರು ಏನು ಹೇಳುತ್ತಾರೆ, ದುಡ್ಡು ಕೊಟ್ಟಿದ್ದೇವೆ, ಸಹಾಯ ಕೊಟ್ಟಿದ್ದೇವೆ, ಸುಮಾರಾಗಿ ಅವರ ಜೀವನ ಸುಧಾರಣೆ ಆಗಿದೆ ಎಂದು ಉತ್ತರ ಬರಬಹುದು ಅದಕ್ಕಾಗಿ ಇದನ್ನು ಬೇರೆ ಒಂದು ಪರಿಣತರಿಗೆ ಕೊಟ್ಟು, ಯೂನಿವರ್ಸಿಟಿಯ ಮುಖಾಂತರ ಅಧ್ಯಯನ ಮಾಡಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಇದರ ಬಗ್ಗೆ ತಾವು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಎಂದರು, ಮಾನ್ಯ ಬಸವಲಿಂಗಪ್ಪನವರು ಹಿಂದೆ ಇಂತಹ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದರು. ಆಗ್ರಿಕಲ್ಚರಲ್ ಎಸ್ಟೇಟ್ ಎಂದು ಮಾಡಿ ಜೀತವಿಮುಕ್ತರಿಗೆ ಅಲ್ಲಿ ಪುನರ್‌ವಸತಿ ಮಾಡಬೇಕೆಂದು ಅವರು ಕಾರ್ಯಕ್ರಮ ಹಾಕಿದ್ದರು. ಜೀತವಿಮುಕ್ತರಿಗೆ ಕೇವಲ ಎರಡು ಸಾವಿರ, ನಾಲ್ಕು ಸಾವಿರ ರೂಪಾಯಿಗಳನ್ನು ಕೊಟ್ಟರೆ ಇವರ ಪುನರ್‌ವಸತಿ ಆಗುವುದಿಲ್ಲ ಎಂದು ಒಳ್ಳೆಯ ಯೋಜನೆಯನ್ನು ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟರು. ಆದರೆ ಕೇಂದ್ರದವರು ಇದನ್ನು ಒಪ್ಪಲಿಲ್ಲ. ೧೫ ಸಾವಿರ ರೂಪಾಯಿಗಳ ಬೆಲೆ ಬಾಳುವ ಒಂದು ಯೂನಿಟ್‌ನ್ನು ಮಾಡಿ ಅಲ್ಲಿ ಇವರಿಗೆ ಪುನರ್‌ವಸತಿ ಮಾಡಬೇಕೆಂದು, ಹೇಳಿದರು. ದುರಾದೃಷ್ಟವಶಾತ್ ಹಾಗೆ ಮಾಡಲಿಲ್ಲ. ಆಮೇಲೆ ನನ್ನ ಇಲಾಖೆಗೆ ಬಾಂಡೆಡ್ ಲೇಬರ್ ವಿಷಯ ಬಂದಾಗ ನಾನು ಇದೇ ಯೋಜನೆಯನ್ನು ತೆಗೆದುಕೊಂಡು ಪ್ರತಿಯೊಬ್ಬ ಜೀತವಿಮುಕ್ತರಿಗೆ ೨೨ ಸಾವಿರ ರೂಪಾಯಿಗಳನ್ನು ಕೊಟ್ಟರೆ ಇವರ ಪುನರ್‌ವಸತಿಯನ್ನು ಯಶಸ್ವಿಯಾಗಿ ಮಾಡಬಹುದು ಎಂದು ಲೆಕ್ಕಹಾಕಿ ಈ ರೀತಿ ಒಂದು ಯೋಜನೆಯನ್ನು ಯಶಸ್ವಿಯಾಗಿ ಮಾಡಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಲೋಹಿಯಾಪುರ ಎಂದು ದಿವಂಗತ ರಾಮ್‌ಮನೋಹರ ಲೋಹಿಯಾ ಅವರ ಹೆಸರಿನಲ್ಲಿ ಮಾಡಿ ಅಲ್ಲಿ ೩೦೦ ಜನ ಬಾಂಡೆಡ್ ಲೇಬರರ್ಸ್‌ಗೆ ಪುನರ್‌ವಸತಿ ಮಾಡಿದ್ದೇವೆ. ಇದೇರೀತಿ ಯೋಜನೆಗಳನ್ನು ಮಾಡುವುದಕ್ಕೆ ಯೋಜನಾ ಆಯೋಗದವರು ಒಪ್ಪಿಕೊಳ್ಳಬೇಕು, ಅದಕ್ಕೆ ಆಗುವಷ್ಟು ದುಡ್ಡನ್ನು ಕೊಡಬೇಕು ಎಂದು ಕೇಂದ್ರಕ್ಕೆ ಬರೆದೆವು. ನಾನು ಅದನ್ನು ಹೇಳಿದಾಗ ಕೇಂದ್ರ ಸರಕಾರದವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಕೇಂದ್ರ ಸರಕಾರದವರು ಈ ರೀತಿಯ ಯೋಜನೆಗಳಿಗೆ ಒಪ್ಪಿಗೆ ಕೊಡುವುದಿಲ್ಲ. ಆದರೆ ಒಬ್ಬರಿಗೆ ನಾಲ್ಕು ಸಾವಿರ ರೂಪಾಯಿ ಕೊಡುತ್ತಿದ್ದುದನ್ನು ಆರೂವರೆ ಸಾವಿರ ರೂಪಾಯಿಗಳಿಗೆ ಮಾಡಿದ್ದಾರೆ. ಈ ಆರೂವರೆ ಸಾವಿರ ರೂಪಾಯಿಗಳ ಸಹಾಯಧನದಿಂದ ಎಲ್ಲೆಲ್ಲಿ ಸರಕಾರಿ ಭೂಮಿ ಸಿಗುತ್ತದೆ, ಭೂಸುಧಾರಣೆಯ ಕಾನೂನಿನ ಪ್ರಕಾರ ಎಲ್ಲೆಲ್ಲಿ ಹೆಚ್ಚುವರಿ ಭೂಮಿ ಇದೆ, ಅದನ್ನು ಇವರಿಗೆ ಆದ್ಯತೆಯ ಮೇರೆಗೆ ಕೊಟ್ಟು ಪುನರ್‌ವಸತಿ ಕಲ್ಪಿಸಿಕೊಡಿ, ಇಂತಹ ಕೆಲಸ ಮಾಡಿ ಎಂದು ನಾನು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ನನ್ನ ಹೆಸರನ್ನು ಒಳ್ಳೆಯದಕ್ಕೋಸ್ಕರ ಬಳಸಿಕೊಂಡರು, ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಜೀತವಿಮುಕ್ತರಿಗೆ ಪುನರ್‌ವಸತಿ ಕಲ್ಪಿಸಿಕೊಡಬೇಕೆಂದು ನಾನು ಪ್ರಯತ್ನ ಮಾಡಿದೆ. ಅದನ್ನು ತಾವು ಹೇಳಿದಿರಿ. ಇದನ್ನು ಕೇಂದ್ರ ಸರಕಾರದವರು ಒಪ್ಪಲಿಲ್ಲ ಎಂದು ಹೇಳಿದರೆ ಅದರ ನ್ಯೂನತೆ ನಿಮ್ಮದು, ಕೇಂದ್ರ ಸರಕಾರದ್ದಲ್ಲ. ಅದಕ್ಕೆ ಕಾರಣ ಏನೆಂದು ಹೇಳಿದರೆ, ಬಾಂಡೆಡ್ ಲೇಬರರ್ಸ್‌ಗೆ ಆಗ್ರಿಕಲ್ಚರಲ್ ಎಸ್ಟೇಟ್ ಮಾಡಿದ್ದೀರಿ. ಒಂದು ಸಾರಿ ಸಹಾಯ ಮಾಡಿ ಅವರನ್ನು ಬಿಟ್ಟು ಬಿಡಿ. ಅದನ್ನೆ ಬಿಟ್ಟು ಹತ್ತು ಜನಕ್ಕೋಸ್ಕರ ಒಬ್ಬ ತಹಶೀಲ್ದಾರರನ್ನು ಇಟ್ಟುಕೊಂಡು ಇವತ್ತಿನವರೆಗೂ ಅದನ್ನು ನಡೆಸಿಕೊಂಡು ಬರುತ್ತಿದ್ದೀರಿ. ಇವರಿಗೆ ದುಡ್ಡು ಖರ್ಚು ಮಾಡುತ್ತಿದ್ದೀರಿ. ನಿಮಗೆ ಪರಿಜ್ಞಾನ ಇದೆಯೇ, ಅಧಿಕಾರಿಗಳಿಗೆ ಪರಿಜ್ಞಾನ ಇದೆಯೇ, ಸರಕಾರಕ್ಕೆ ಇದೆಯೇ ಎಂಬ ಪ್ರಶ್ನೆ ಮಾಡುತ್ತೇನೆ. ಸ್ವಾಮಿ ನಾನು ಹೇಳುತ್ತಿದ್ದೇನೆ, ಅನಧಿಕೃತವಾಗಿ ಸಾಗುವಳಿ ಮಾಡಿರತಕ್ಕ ಜಮೀನನ್ನು ರೆಗ್ಯುಲರೈಸ್ ಮಾಡುವುದು ಬೆಳೆದುಕೊಂಡು ಬರುತ್ತಿದೆ. ಇವೊತ್ತು ಚಿಕ್ಕಮಗಳೂರಿನಲ್ಲಿ ೭೦ ಸಾವಿರ ಎಕರೆ ಅನ್‌ಆಥರೈಸ್ಡ್ ಕಲ್ಟಿವೇಷನ್ ಆದ ಜಮೀನು ಇದೆ, ಹಾಸನ ಜಿಲ್ಲೆಯಲ್ಲಿ ಇದೆ, ಕೊಡಗು ಜಿಲ್ಲೆಯಲ್ಲಿ ಇದೆ, ಮೈಸೂರು ಜಿಲ್ಲೆಯಲ್ಲಿ ಇದೆ, ಈ ಜಮೀನನ್ನು ರೆಗ್ಯುಲರೈಸೇಷನ್ ಮಾಡತಕ್ಕದ್ದು ಸರಿಯಲ್ಲ. ಇದು ನೀತಿಗೆ ವಿರೋಧವಾಗಿರತಕ್ಕಂಥಾದ್ದು. ಈ ಜಮೀನುಗಳಲ್ಲಿ ಆಗ್ರಿಕಲ್ಚರಲ್ ಎಸ್ಟೇಟ್‌ಗಳನ್ನು ಮಾಡಿ, ಜೀತ ವಿಮುಕ್ತರಿಗೆ ಪುನರ್‌ವಸತಿ ಆಗುವ ರೀತಿ ಯೋಜನೆ ಮಾಡಿ, ಅವರ ಕಾಲ ಮೇಲೆ ಅವರು ನಿಂತುಕೊಳ್ಳುವ ಹಾಗೆ ಯೋಜನೆ ತಯಾರು ಮಾಡಿ, ಇದನ್ನು ಕಾರ್ಯಗತ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹತ್ತು ಜನಜೀತ ವಿಮುಕ್ತರಿಗೆ ರೀಆರ್ಗನೈಸ್ ಮಾಡುವುದಕ್ಕೆ ಒಬ್ಬ ತಹಶೀಲ್ದಾರರನ್ನು ಇಟ್ಟಿರುವುದು ನನ್ನ ಯೋಜನೆ ಅಲ್ಲ, ಅದು ಮಾನ್ಯ ಬಸವಲಿಂಗಪ್ಪ

ನವರ ಯೋಜನೆ. ಇವೊತ್ತು ಲೋಹಿಯಾಪುರದಲ್ಲಿ ನಾವು ೩೦೦ ಜನಕ್ಕೆ ಪುನರ್‌ವಸತಿ ಮಾಡಿದ್ದೇವೆ, ಅಲ್ಲಿ ಒಬ್ಬರನ್ನೂ ಇಟ್ಟಿಲ್ಲ. ತಹಶೀಲ್ದಾರರನ್ನು ಇಡುವುದು ನೀವು ಮಂಜೂರು ಮಾಡಿದಂತಹ ಯೋಜನೆ. ಇದನ್ನು ನಾನು ಏನೂ ಮಾಡಿಲ್ಲ. ಇವರನ್ನು ತೆಗೆದುಹಾಕಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮೊದಲು ತಾವು ತಹಶೀಲ್ದಾರರುಗಳನ್ನು ಅಲ್ಲಿಂದ ತೆಗೆಯಿರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ತೀರ್ಮಾನ ತೆಗೆದುಕೊಂಡಿದ್ದೇವೆ, ಅವರನ್ನು ಅಲ್ಲಿಂದ ತೆಗೆಯುತ್ತೇವೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಫಲಾನುಭವಿಗಳ ಸ್ಥಿತಿ ಉತ್ತಮ ಗೊಳ್ಳುವುದಕ್ಕೆ ಇವರಿಗೆ ಬೇರೆ ಬೇರೆ ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯ ಕಲ್ಪಿಸಿಕೊಡುವಂತೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದು ಏನು ಕಾರ್ಯಗತ ಆಗಿದೆಯೇ ಎಂದು ಗೊತ್ತಾಗಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮೂರು ತಿಂಗಳ ಹಿಂದೆ ಈ ಸೂಚನೆಯನ್ನು ಕೊಟ್ಟಿದ್ದೇನೆ. ಈ ಜನರಿಗೆ ನಾನ್ಕೂರು, ಐನೂರು, ಸಾವಿರ, ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇವರು ಬಡತನದ ರೇಖೆಯಿಂದ ಮೇಲೆ ಬಂದಿಲ್ಲ, ಅವರು ಬಡತನ ರೇಖೆಯಿಂದ ಮೇಲೆ ಬರುವಂತೆ ಫಲಾನುಭವಿಗಳಿಗೆ ಸಹಾಯ ಕಲ್ಪಿಸಿಕೊಡಬೇಕೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಅವರ ತಾಲ್ಲೂಕಿನಲ್ಲಿ ಆಗದೇ ಇರುವಂತಹ ಯಾವುದಾದರೂ ಪ್ರಕರಣವನ್ನು ಗಮನಕ್ಕೆ ತಂದಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ತಾಲ್ಲೂಕುವಾರು ವಿವರಗಳನ್ನು ಕೇಳಿದ್ದೆ ಅವರು ಕೊಟ್ಟಿಲ್ಲ. ಬೆಂಗಳೂರು ಜಿಲ್ಲೆಯಲ್ಲಿ ನೆರವು ಪಡೆದಿರತಕ್ಕ ಫಲಾನುಭವಿಗಳ ಸಂಖ್ಯೆ ೩೮೬೯ ಎಂದು ಹೇಳಿದ್ದಾರೆ. ಇದು ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಇದೆ ? ಒಂದೇ ತಾಲ್ಲೂಕಿನಲ್ಲಿ ಇಷ್ಟೂ ಆಗಬಹುದು, ನಮ್ಮ ತಾಲ್ಲೂಕಿನ ಅಂಕಿ ಅಂಶಗಳನ್ನು ಕೇಳಿದ್ದೆ ತಾವು ಕೊಟ್ಟಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ತಾಲ್ಲೂಕಿನ ಬಗ್ಗೆ ಅಂಕಿ ಅಂಶಗಳನ್ನು ತಾವು ಕೇಳಿಲ್ಲ.

ಅಧ್ಯಕ್ಷರು.—ಶ್ರೀ ಬಿ. ಬಸವಲಿಂಗಪ್ಪನವರ ಪ್ರಶ್ನೆ ಸಂಖ್ಯೆ ೪೭ (೩೨೩) ಶ್ರೀ ವೇದಾಂತ ಹೆಮ್ಮಿಗೆ ಇವರ ಪ್ರಶ್ನೆ ಸಂಖ್ಯೆ ೪೭ (೧೮೭) ಮತ್ತು ಶ್ರೀ ಎಂ.ಎಸ್. ಪಾಟೀಲ್ ಇವರ ಪ್ರಶ್ನೆ ಸಂಖ್ಯೆ ೪೮ (೧೦೮) ಇವುಗಳನ್ನು ಮುಂದೂಡಲಾಗಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬರುವಷ್ಟರಲ್ಲಿ ಅಲ್ಲಿರುವ ಮನೆಗಳು ಬಿದ್ದು ಹೋಗಿರುತ್ತವೆ. ನನ್ನ ಹೆಸರಿನ ಮುಂದೆ ನರಸಿಂಹರಾಜಾ ಕ್ಷೇತ್ರ ಎಂದು ಹಾಕಿರು ತ್ತೀರಿ, ಏನು ಮುಕ್ತರುನ್ನೀಸಾ ಬೇಗಂ ಅವರಿಗೂ ನಮಗೂ ಜಗಳ ತಂದು ಹಾಕಬೇಕೆಂದು ಮಾಡಿ ದ್ದೀರಾ ?

ಅಧ್ಯಕ್ಷರು.—ಮುಂದಿನ ಪ್ರಶ್ನೆ ಬಾಬೂರೆಡ್ಡಿ ತುಂಗಳ್ ಅವರದ್ದು.

ಅಮಲ ರುಾರಿ ಗ್ರಾಮದಲ್ಲಿ ನೀರಿನ ತೊಟ್ಟಿ ನಿರ್ಮಾಣ ಮಾಡಂವುದು

೪೯ (೩೭೧) ಶ್ರೀ ಬಾಬೂರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸ ವರೇ :—

ಅ) ಬೀಳಗಿ ತಾಲ್ಲೂಕಿನ ಅಮಲರುಾರಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ ಆರಂಭ ವಾಗಿದ್ದು ಯಾವಾಗ ?